**ದಿನಾಂಕಃ 19.01.2023**
**ಓ.ಎಸ್ ಃ 37 ರಿಂದ 40/2015**
**ಪಿ ಡಬ್ಲ್ಯೂ ಃ 6**

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ 12 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಪಿ.ಎಸ್.ಆರ್ ರವರಿಂದ ಃ**

ನಾನು ಹಳೇಹಳ್ಳಿ ಗ್ರಾಮದ ಸರ್ವೆನಂಃ 6 ಮತ್ತು 7 ನ್ನು ನೋಡಿರುತ್ತೀರಾ ಎಂದರೆ ನೋಡಿರುತ್ತೇನೆ. 6 ನೇ ಸರ್ವೆ ನಂಬರಿನಲ್ಲಿ 20 ಎಕರೆ 24 ಗುಂಟೆ ಇದೆ ಎಂದರೆ ಸಾಕ್ಷಿಯು ಆ ರೀತಿ ಜನರು ಹೇಳುತ್ತಾರೆ ಎಂದು ನುಡಿಯುತ್ತಾರೆ. 7 ನೇ ಸರ್ವೆ ನಂಬರಿನಲ್ಲಿ 26 ಎಕರೆ 1 ಗುಂಟೆ ಇದೆ ಎಂದರೆ ಸಾಕ್ಷಿಯು ಆ ರೀತಿ ಜನರು ಹೇಳುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 7 ರಲ್ಲಿ ಈ ಕೇಸಿನ 12 ನೇ ಪ್ರತಿವಾದಿ ಪುಟ್ಟಸ್ವಾಮಿ ಬಿನ್ ಮುದ್ದಯ್ಯ ರವರು ಖರೀದಿ ಮಾಡಿ ಸ್ವಾಧೀನದಲ್ಲಿದ್ದಾರೆ ಎಂದರೆ ಸಾಕ್ಷಿಯು ಖರೀದಿ ಮಾಡಿರುತ್ತಾರೆ, ಬಂದು ಹೋಗಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 7 ರಲ್ಲಿ 12 ನೇ ಪ್ರತಿವಾದಿ ಅಲ್ಲದೇ ಅಂಕೇಗೌಡರ ಮಗ ಕೆಂಪೇಗೌಡ ರವರು ಒಂದು ಭಾಗದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಅವರೂ ಕೂಡ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 7 ರಲ್ಲಿ 12 ನೇ ಪ್ರತಿವಾದಿ ಅಲ್ಲದೇ ಅಂಕೇಗೌಡರ ಮಗ ಇನ್ನೊಬ್ಬ ಚಿಕ್ಕೂರವರು ಒಂದು ಭಾಗದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಅವರೂ ಕೂಡ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಕೇಸಿನ ವಾದಿಗಳು ಸರ್ವೆ ನಂಬರ್ 7 ರಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ನಮ್ಮದು ಎಂದು ಸ್ವಾಧೀನದಲ್ಲಿ ಇರುವುದಿಲ್ಲ ಆದರೆ ದನಕರು ಮೇಯಿಸುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 7 ವಾದಿಗಳ ಕುಟುಂಬಕ್ಕೆ ಸೇರಿದ್ದಲ್ಲ ಎಂದರೆ ನನಗೆ ಗೊತ್ತಿಲ್ಲ. 7 ನೇ ಸರ್ವೆ ನಂಬರ್ ಈ ಕುಟುಂಬದ ಮೂಲ ಪುರುಷ ಪಿಟ್ಟೇಗೌಡ ಎನ್ನುವವರಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಯಾರು ಹೇಳಿ ಬರೆಸಿದರು ಎಂದರೆ ಸಾಕ್ಷಿಯು ನಾನು ಹೆಬ್ಬೆಟ್ಟಿನ ಗುರುತು ಹಾಕಿದ್ದು ಮಹಾಲಿಂಗ ರವರು ಹೇಳಿ ಬರೆಸಿರುತ್ತಾರೆ ಎಂದುನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆದಿದೆ ಎಂದು ಗೊತ್ತಿದೆಯಾ ಎಂದರೆ ಗೊತ್ತಿರುವುದಿಲ್ಲ. 7 ನೇ ಸರ್ವೆ ನಂಬರ್

ರಲ್ಲಿ ವಾದಿಗಳ ಕುಟುಂಬಕ್ಕೆ ಸೇರಿದ್ದು ಅವರು ಸ್ವಾಧೀನದಲ್ಲಿದ್ದಾರೆ ಎಂದು ನಾನು ಹೇಳಿರುತ್ತೇನಾ ಎಂದರೆ ಹೇಳಿರುವುದಿಲ್ಲ. **12** ನೇ ಪ್ರತಿವಾದಿ ಸರ್ವೆ ನಂಬರ್ **7** ನ್ನು **2014** ರಲ್ಲಿ ಖರೀದಿ ಮಾಡಿ ಅವರೇ ಸ್ವಾಧೀನದಲ್ಲಿದ್ದು ಅಭಿವೃದ್ಧಿ ಮಾಡಿರುತ್ತಾರೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.